ಕರ್ನಾಟಕ ವಿಧಾನ ಸಭೆ

348 ಶ್ರೀ ವಸಂತ್ ಬಂಗೇರ ಕೆ.

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಈವರೆವಿಗೂ ಅಕ್ರಮ-ಸಕ್ರಮ ಸಮಿತಿ, ಆರಾಧನ ಸಮಿತಿ, ಆಶ್ರಯ ಸಮಿತಿ ಹಾಗೂ ಇನ್ನಿತರ ಸಮಿತಿಗಳು ರಚನೆಯಾಗಿರುವುದಿಲ್ಲ, ಇದಕ್ಕೆ ಕಾರಣವೇನು;

ಅನಧಿಕೃತ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಎ ಮತ್ತು 94ಬಿ ರಡಿ ನಮೂನೆ 50, 53ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡಲು ಕಾಯ್ದೆಯಲ್ಲಿ ಕಲ್ಪಿಸಿದ್ದ ಕಾಲಾವಧಿಯು ದಿ:26.04.2008ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ಅವಧಿಯನ್ನು ಮುಂದುವರೆಸಲು ಕಾಯ್ದೆಗೆ ತಿದ್ದುಪಡಿ ತರಲು ವಿಧೇಯಕವನ್ನು ಪ್ರಸ್ತುತ ನಡೆಯುವ ವಿಧಾನ ಮಂಡಲದ ಅಧಿವೇಶನದಲ್ಲಿ ಮಂಡಿಸಲಾಗುತ್ತದೆ. ಕಾಯ್ದೆಗೆ ತಿದ್ದುಪಡಿ ಆದೇಶ ಜಾರಿಗೆ ಬಂದ ನಂತರ ಅಕ್ರಮ-ಸಕ್ರಮ ಸಮಿತಿಗಳನ್ನು ರಚಿಸಲಾಗುವುದು.

ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯು ಸರ್ಕಾರದ ಆದೇಶ ಸಂಖ್ಯೆ: ಕಂಇ 12 ಮುಸರ 2008, ದಿ:31.12.2008ರನ್ವಯ ರಚಿಸಲಾಗಿದೆ ಹಾಗೂ ಬೆಳ್ತಂಗಡಿ ಆಶ್ರಯ ಸಮಿತಿಯನ್ನು ವಸತಿ ಇಲಾಖೆಯ ಆದೇಶ ಸಂಖ್ಯೆ: ವಇ 31 ಹೆಚ್‌ಎಎಸ್ 08, ದಿ:12.12.2008ರನ್ವಯ ರಚಿಸಲಾಗಿದೆ ಎಂದು ವಸತಿ ಇಲಾಖೆಯ ಪತ್ರ ಸಂಖ್ಯೆ: ವಇ 51 ಹೆಚ್‌ಎಎಂ 2009, ದಿ:07.07.2009ರಲ್ಲಿ ತಿಳಿಸಿದೆ.

ಆ) ಸಮಿತಿಗಳನ್ನು ರಚನೆ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಮೇಲೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

172 ಡಾ: ಬಗಲಿ ಸಾರ್ವಭೌಮ ಸಾತಗೌಡ(ಇಂಡಿ)

ಶ್ರೀ ಮುರುಗೇಶ್ ಆರ್.ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಇಂಡಿ ಕ್ಷೇತ್ರದಲ್ಲಿ ಯಾವ ಯಾವ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ.

ಸಕ್ಕರೆ ಕಾರ್ಖಾನೆ, ವೈನ್, ಜವಳಿ ಮತ್ತು ಸಿದ್ಧ ಉಡುಪು ತಯಾರಿಕಾ ಘಟಕಗಳನ್ನು ಸ್ಥಾಪಿಸಬಹುದಾಗಿದೆ. ಈಗಾಗಲೇ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯು ಎರಡು ಹೊಸ ಸಕ್ಕರೆ ಕಾರ್ಖಾನೆ ಹಾಗೂ ಒಂದು ವಿದ್ಯುತ್ ಉತ್ಪಾದನಾ ಘಟಕಕ್ಕೆ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ.

ಆ) ಈ ಕಾಮಗಾರಿಗಳಿಗಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಯೋಜನೆ ಸರಕಾರದ ಮುಂದಿದೆಯೇ,

ಮೇಲ್ಕಂಡ ಎರಡು ಸಕ್ಕರೆ ಕಾರ್ಖಾನೆಗಳಿಗೆ ಒಟ್ಟು 192 ಎಕರೆ ಭೂಪ್ರದೇಶ ಅವಶ್ಯಕವಿದ್ದು, 94 ಎಕರೆ ಜಾಗವನ್ನು ಮೆ: ಜಮಖಂಡಿ ಶುಗರ್ಸ್ ಲಿಮಿಟೆಡ್ ರವರು ಕೆಐಎಡಿಬಿ ಮುಖೇನ ಹಾಗೂ 98 ಎಕರೆ ಜಾಗವನ್ನು ಮೆ: ನೇರವಾಗಿ ರೈತರಿಂದ ಖರೀದಿಸ ಬೇಕಾಗಿದೆ.

ಇ) ಹಾಗಿದ್ದಲ್ಲಿ, ಎಷ್ಟು ಭೂಮಿಯನ್ನು ಯಾವ ಸ್ಥಳದಲ್ಲಿ ಸ್ವಾಧೀನಪಡಿಸಿಕೊಳ್ಳಬೇಕೆಂಬುದರ ಬಗ್ಗೆ ಸಿದ್ಧಪಡಿಸಿದ ಯೋಜನೆ ಸರ್ಕಾರದ ಮುಂದಿದೆ.

(ಅ) ಮೆ: ಜಮಖಂಡಿ ಶುಗರ್ಸ್ ಲಿಮಿಟೆಡ್, ನಾದ-ಕೆ.ಡಿ ಗ್ರಾಮ, ಇಂಡಿ ತಾಲ್ಲೂಕು ಈ ಗ್ರಾಮದಲ್ಲಿ 84 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ವೆಚ್ಚವನ್ನು ಕೆಐಎಡಿಬಿಗೆ ಪಾವತಿಸಬೇಕಾಗಿದೆ.

(ಆ) ಇಂಡಿ ತಾಲ್ಲೂಕಿನ ಶಿರನಾಳ ಗ್ರಾಮದಲ್ಲಿ ಒಟ್ಟು 62 ಎಕರೆ 27 ಗುಂಟೆ ಭೂಮಿಯನ್ನು ಜವಳಿ ಪಾರ್ಕ್‌ಗಾಗಿ ಗುರುತಿಸಲಾಗಿದ್ದು, ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇಂಡಿ ಮತ ಕ್ಷೇತ್ರದಲ್ಲಿ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಎಷ್ಟು ಜನ ತರುಣ ಉದ್ಯಮಿಗಳು ಮುಂದೆ ಬಂದಿದ್ದಾರೆ. ಈ ಉದ್ಯಮಿಗಳಿಗೆ ಯಾವ ಯಾವ ಸೌಲಭ್ಯವನ್ನು ನೀಡಲಾಗಿದೆ.

ಕಳೆದ 5 ವರ್ಷಗಳಲ್ಲಿ ಅಂದರೆ 2005-06 ರಿಂದ ಇಲ್ಲಿಯವರೆಗೆ ಇಂಡಿ ತಾಲ್ಲೂಕಿನಲ್ಲಿ ರಾಜ್ಯ ಏಕಗವಾಕ್ಷಿ ಸಮಿತಿ ಸಭೆಯು 3 ಯೋಜನೆಗಳನ್ನು ಅನುಮೋದಿಸಿದೆ. ಈ ಯೋಜನೆಗಳಿಂದ ರೂ.145.97 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 630 ಜನರಿಗೆ ಉದ್ಯೋಗ ಅವಕಾಶ ಲಭ್ಯವಾಗಲಿದೆ. ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಯೋಜನೆಗಳಿಗೆ ರಾಜ್ಯದ 2009-14ರ ಕೈಗಾರಿಕಾ ನೀತಿಯಂತೆ ಉತ್ತೇಜನ ಹಾಗೂ ರಿಯಾಯಿತಿಗಳಿಗೆ ಅರ್ಹವಾಗಿರುತ್ತವೆ.

ಶ್ರೀ ಡಾ॥ ಬಿಗಲಿ ಸಾರ್ವಭೌಮ ಸಾತಗೌಡ(ಇಂಡಿ)ರವರ ಪ್ರಶ್ನೆ ಸಂಖ್ಯೆ: 172

ಅನುಬಂಧ

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಕೈಗಾರಿಕೆಗಳಿಗೆ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯಲ್ಲಿ 2004–05ನೇ ಸಾಲಿನಿಂದ ಈವರೆಗೂ ಅನುಮೋದನೆ ನೀಡಿರುವ ವಿವರಗಳು

ಕ್ರ ಸಂ	ಕಂಪನಿಯ ಹೆಸರು	ವಿಳಾಸ	ಸ್ಥಳ	ವಸ್ತುಗಳು	ಸಭೆಯ ದಿನಾಂಕ	ಬಂಡವಾಳ ಹೂಡಿಕೆ ಮೊತ್ತ	ಭೂಮಿ (ಎಕರೆ ಗಳಲ್ಲಿ)	ಲ್ಯಾಂಡ್ ಏಜೆನ್ಸಿ	ಉದ್ಯೋಗ ಸಂಖ್ಯೆ	ಷರಾ
1.	ಜಮಖಂಡಿ	ಹಿರೆಪದಸಾಲಗಿ ಪೋಸ್ಟ್, ನನಗೂರು, ಜಮಖಂಡಿ ತಾ: ಬಾಗಲಕೋಟೆ ಜಿಲ್ಲೆ–587301	ನಾಡಾ ಕೆ.ಡಿ ವಿಲೇಜ್ ಇಂಡಿ ತಾ· ಬಿಜಾಪುರ ಜಿಲ್ಲೆ	ವೈಟ್ ಕ್ರಿಸ್ಟಲ್ ಶುಗರ್ 2500 ಟಿಸಿಡಿ ಸಾಮರ್ಥ್ಯ	29–7–2006	48 89 ಕೋಟಿಗಳು	94	ಕೆ.ಐ.ಎ. ಡಿ.ಬಿ	300	ಅನುಷ್ಠಾನ ಹಂತದಲ್ಲಿದೆ
2.	ಇಂಡಿಯನ್ ಶುಗರ್ಸ್ ಮ್ಯಾನುಫಾಕ್ಚರಿಂಗ್ ಕಂ ಲಿಮಿಟೆಡ್	ನಂ4028/15ಎ ಲಕ್ಷ್ಮಿ ರಸ್ತೆ, ಪಂಡವರಾಪುರ ಮಹಾರಾಷ್ಟ್ರ	ಹವಿನಾಳ ವಿಲೇಜ್, ಇಂಡಿ ತಾ. ಬಿಜಾಪುರ ಜಿಲ್ಲೆ	ವೈಟ್ ಕ್ರಿಸ್ಟಲ್ ಶುಗರ್ 2500 ಜೊತೆಗೆ 12 ಎಂ. ಡಬ್ಲ್ಯೂ ಕೋ ಜನರೇಷನ್ ಪ್ಲಾಂಟ್	28–5–2007	49.33 ಕೋಟಿಗಳು	98	109 ಸೆಕ್ಷನ್ ಅಡಿಯಲಿ	280	ಅನುಷ್ಠಾನ ಹಂತದಲ್ಲಿದೆ
3.	ಇಂಡಿಯನ್ ಶುಗರ್ಸ್ ಮ್ಯಾನುಫಾಕ್ಚರಿಂಗ್ ಕಂ ಲಿಮಿಟೆಡ್	ಕೇರಾಫ್ ವಿಠಲ್ ಆಟೋ ಲೈನ್, ಬಸ್‌ಸ್ಟ್ಯಾಂಡ್ ಎದುರು ತೆಂಬುರ್ನಿ ಎನ್ ಹೆಚ್–9, ಮುದ್ದೆಬಿಹಾಳ್ ತಾ: ಬಿಜಾಪುರ	ಹವಿನಾಳ್ ವಿಲೇಜ್ ಇಂಡಿ ತಾ: ಬಿಜಾಪುರ ಜಿಲ್ಲೆ	60 ಕೆ.ಎಲ್ ಪಿ.ಡಿ ಡಿಸ್ಟಿಲರಿ ವಿತ್ 10.50 ಎಂ. ಡಬ್ಲ್ಯೂ –ಕೋ–ಜನರೇಷನ್ ಪವರ್ ಪ್ಲಾಂಟ್	28–2–2009	47.75 ಕೋಟಿಗಳು	54	ಅಸ್ತಿತ್ವದಲ್ಲಿರುವ ಭೂಮಿ	50	ಅನುಷ್ಠಾನ ಹಂತದಲ್ಲಿದೆ.

		ಜಿಲ್ಲೆ								
					ಒಟ್ಟು	145.97	246	63		